ಪ್ರತಿಬಿಂಬ

PRATIBIMBA –Multidisciplinary Kannada Research Journal of IIMRD
ISSN: 2582-2284
Vol-4 Issue 5, Mar-Apr, 2023, Pp. 58-65.
©*IIMRD*, Mysuru
IIMRD JOURNALS
www.iimrd.com

# ಕರ್ನಾಟಕದ ಮಹಿಳಾ ಸಬಲೀಕರಣದಲ್ಲಿ ಕಾನೂನುಗಳ ಪಾತ್ರ

**ಕರಿಯಮ್ಮ ಜಿ. ಕೆ.***

*ಸಹ ಪ್ರಾಧ್ಯಾಪಕರು. ಇತಿಹಾಸ ವಿಭಾಗ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕಾಡುಗೋಡಿ,
ಬೆಂಗಳೂರು ಉತ್ತರ ವಿಶ್ವವಿದ್ಯಾಲಯ, ಬೆಂಗಳೂರು.

***ಸಾರಾಂಶ: (Abstract)***

*ಭಾರತದ ಒಟ್ಟು ಜನಸಂಖ್ಯೆಯಲ್ಲಿ ಶೇ.48.5ರಷ್ಟಿರುವ ಮಹಿಳೆಯರ ಸಾಕ್ಷರತ ಪ್ರಮಾಣವು 64.63% ರಷ್ಟಿದೆ. ಪ್ರಾಚೀನ ಕಾಲದಿಂದಲೂ ಮಹಿಳೆಯರನ್ನು ಒಂದೆಡೆ ಪೂಜನೀಯ ಭಾವನೆಯಿಂದ ಕಂಡರೆ ಮತ್ತೊಂದೆಡೆ ವಿವಿಧ ಕ್ಷೇತ್ರಗಳಲ್ಲಿ ಸ್ವತಂತ್ರವಾಗಿ ಭಾಗವಹಿಸದಂತೆ ನಿರ್ಬಂಧಿಸಲಾಗಿದೆ. ಈಗಾಗಿ ಇಂದಿಗೂ ಕೂಡ ಮಹಿಳೆಯರು ಸಾಮಾಜಿಕವಾಗಿ ಮಾತ್ರವಲ್ಲದೆ ಶೈಕ್ಷಣಿಕ ಮತ್ತು ಆರ್ಥಿಕ ಕ್ಷೇತ್ರಗಳಲ್ಲೂ ಹಿಂದುಳಿದ್ದಾಳೆ. ಸ್ವಾತಂತ್ರ್ಯದ ನಂತರ ಮಹಿಳೆರನ್ನು ಸಬಲೀಕರಣಗೊಳಿಸಬೇಕೆಂಬ ಕಾರಣದಿಂದ ಸರ್ಕಾರವು ಸಂವಿಧಾನಾತ್ಮಕವಾಗಿ ವಿವಿಧ ಕಾನೂನುಗಳನ್ನು ರೂಪಿಸಿ ಅನುಷ್ಠಾನಗೊಳಿಸಿದೆ. ಪ್ರಸ್ತುತ ಲೇಖನದ್ದಲ್ಲಿ ಮಹಿಳೆಯರ ಅಭಿವೃದ್ಧಿಯಲ್ಲಿ ಈ ಕಾನೂನುಗಳು ಹೇಗೆ ಪಾತ್ರವಹಿಸುತ್ತಿವೆ ಎಂಬುದನ್ನು ಚರ್ಚಿಸಲಾಗಿದೆ.*

***ಮುಖ್ಯಪದಗಳು: (Keywords)*** *ಶಿಶುಭ್ರೂಣ ಹತ್ಯೆ, ಲಿಂಗ ಸಮಾನತೆ, ಮಹಿಳಾ ಸಬಲೀಕರಣ, ಲೈಂಗಿಕ ದೌರ್ಜನ್ಯ, ಸಂವಿಧಾನಾತ್ಮಕ ರಕ್ಷಣೆ.*

## ಪೀಠಿಕೆ

ಮಹಿಳೆಯರು ಪ್ರಮುಖವಾಗಿ ವರದಕ್ಷಿಣೆ, ಅತಿಯಾದ ದುಡಿತ, ಜಾತಿಯ ತುಳಿತ, ಕೋಮು ಗಲಭೆ, ಅತ್ಯಾಚಾರ, ದಬ್ಬಾಳಿಕೆ, ಶಿಶುಭ್ರೂಣ ಹತ್ಯೆ, ಕಡಿಮೆ ಕೂಲಿ, ಲೈಂಗಿಕ ದೌರ್ಜನ್ಯಗಳು, ಮರ್ಯಾದ ಹತ್ಯೆಗಳು, ಲಿಂಗ ಅಸಮಾನತೆ, ಅಪೌಷ್ಠಿಕತೆ, ಅಗತ್ಯ ಆರೋಗ್ಯ ಸೌಲಭ್ಯಗಳ ಕೊರತೆ ಮತ್ತಿತರ ಆರ್ಥಿಕ ಸೌಕರ್ಯಗಳ ಅಭಾವ–ಅವಮಾನ ಮುಂತಾದ ಸಮಸ್ಯೆಗಳನ್ನು ಎದುರಿಸುತ್ತಿದ್ದಾಳೆ. ಈ ಸಮಸ್ಯೆಗಳು ಸ್ತ್ರೀಯ ಮನೋಸ್ಥೈರ್ಯವನ್ನು ಕುಗ್ಗಿಸಿವೆ. ಆದ್ದರಿಂದ ಕಾಯಿದೆ ಕಾನೂನುಗಳ ರಕ್ಷಣೆ ಅವಶ್ಯಕವಾಗಿ ಆಗಬೇಕಾಗಿದೆ. 1975ನೇ ವರ್ಷವನ್ನು ವಿಶ್ವಸಂಸ್ಥೆಯು ಅಂತರಾಷ್ಟ್ರೀಯ ಮಹಿಳಾ ವರ್ಷ ಎಂಬುದಾಗಿ ಘೋಷಿಸಿದ್ದರೂ, 2003ರ ಹ್ಯೂಮನ್ ಡೆವಲಪ್‌ಮೆಂಟ್ ರಿಪೋರ್ಟ್ ಪ್ರಕಾರ ಇಂದಿಗೂ ಮಹಿಳೆಯರು ಎದುರಿಸುತ್ತಿರುವ ಅನೇಕ ಸಮಸ್ಯೆಗಳು, ಅಂತರಾಷ್ಟ್ರೀಯ ಸಮ್ಮೇಳನಗಳು, ಸಂವಿಧಾನಾತ್ಮಕ ರಕ್ಷಣೆಗಳು, ಲಿಂಗಸಮಾನತೆಗಾಗಿ ನಡೆದ ಪ್ರಯತ್ನಗಳನ್ನು ಕುರಿತು ಇಂದಿಗೂ ಚರ್ಚಿಸುತ್ತಿವೆ. ಜಾಗತಿಕ ಜನಸಂಖ್ಯೆಯಲ್ಲಿ ಶೇಕಡ 48.3ರಷ್ಟು ಮಹಿಳೆಯರ ಪ್ರಮಾಣದಲ್ಲಿದ್ದು, ಅವರ ಅಭಿವೃದ್ದಿಗಾಗಿ ಕೈಗೊಳ್ಳಬೇಕಾದ ಕ್ರಮಗಳನ್ನು ಕಾನೂನು ನೆರವಿನ ಮೂಲಕ ಕಾಣಬಹುದಾಗಿದೆ. ಮಹಿಳಾ ಸಬಲೀಕರಣದಲ್ಲಿ ಈ ಕಾಯ್ದೆಗಳು ಅಗತ್ಯವಾಗಿದೆ.

*Please cite this article as: ಕರಿಯಮ್ಮ ಜಿ. ಕೆ.* (2023). ಕರ್ನಾಟಕದ ಮಹಿಳಾ ಸಬಲೀಕರಣದಲ್ಲಿ ಕಾನೂನುಗಳ ಪಾತ್ರ. ಪ್ರತಿಬಿಂಬ: *ಮಲ್ಟಿಡಿಸಿಪ್ಲಿನರಿ ಕನ್ನಡ ರೀಸರ್ಚ್ ಜರ್ನಲ್ ಆಫ್ ಐಐಎಂಆರ್‌ಡಿ, 4(5). ಪು.ಸಂ. 58–65.*

**ಮಹಿಳಾ ಸಬಲೀಕರಣ**

ಸಬಲೀಕರಣವು ನಿರಂತರ ಪ್ರಕ್ರಿಯೆಯಾಗಿದ್ದು, ಮಹಿಳಾ ಸಮಾನತೆ, ಸ್ವಾತಂತ್ರ್ಯ, ಮುಕ್ತ ಅವಕಾಶ ಕಲ್ಪಿಸಿಕೊಡುವುದು, ಸಮಾನ ಶೈಕ್ಷಣಿಕ ಅವಕಾಶಗಳು, ಸಾಂಸ್ಕೃತಿಕ, ಸಾಮಾಜಿಕ, ರಾಜಕೀಯ, ಆರ್ಥಿಕ ಹಾಗೂ ಅಭಿವೃದ್ಧಿಗೆ ಅಗತ್ಯವಾದ ಅವಕಾಶಗಳು, ಸಂವಿಧಾನಾತ್ಮಕ ರಕ್ಷಣೆ, ಭದ್ರತೆಗಳಿದ್ದಾಗ್ಯೂ ಸಹ ಮಾನವ ಹಕ್ಕುಗಳನ್ನು ಅನುಭವಿಸುತ್ತಿರುವುದು ಕೇವಲ 10%ರಷ್ಟು ಮಾತ್ರ. ಮಹಿಳೆಯರ ಸಬಲೀಕರಣಕ್ಕಾಗಿ ಅಗತ್ಯವಾದ ಸಲಹೆಗಳು, ಆರೋಗ್ಯಕರ ವಾತಾವರಣ ಮತ್ತು ಸೌಕರ್ಯಗಳು ದೊರಕುತ್ತಿಲ್ಲ. ಸಾಮಾನ್ಯವಾಗಿ ಮಹಿಳೆಯರು ಅರೆಕಾಲಿಕ ಇಲ್ಲವೆ ತಾತ್ಕಾಲಿಕ ವೃತ್ತಿಯಲ್ಲಿ ತೊಡಗಿದ್ದಾರೆ. ಭಾರತವು ಮಹಿಳಾ ಸಬಲೀಕರಣದಲ್ಲಿ ನಿರೀಕ್ಷಿತ ಪ್ರಮಾಣದಲ್ಲಿ ಗುರಿ ತಲುಪಿಲ್ಲ. ಇದಕ್ಕೆ ಉದಾಹರಣೆ ಅಂತರಾಷ್ಟ್ರೀಯ ಮಟ್ಟದಲ್ಲಿ ಭಾರತವು ಮಹಿಳಾ ಸಬಲೀಕರಣದಲ್ಲಿ 122ನೇ ಸ್ಥಾನದಲ್ಲಿದೆ.

ಮಹಿಳೆಯರ ಸಾಮಾಜಿಕ ಸ್ಥಾನಮಾನ, ನ್ಯಾಯ, ಆರ್ಥಿಕ, ಧಾರ್ಮಿಕ, ಸಾಂಸ್ಕೃತಿಕ ತಳಹದಿಯ ಮೂಲಕ ಸಬಲೀಕರಣಕ್ಕೆ ಯತ್ನಗಳು ನಡೆದಿದ್ದರೂ ಕೂಡ ಇಂದಿಗೂ ಅನೇಕ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ಅಪೌಷ್ಠಿಕತೆ, ಅನಾರೋಗ್ಯ, ಮರಣದ ಪ್ರಮಾಣದಲ್ಲಿ ಹೆಚ್ಚಳ, ಶಿಕ್ಷಣದ ಕೊರತೆ, ಸರಿಯಾದ ಪೋಷಣೆ ಇಲ್ಲದೆ ಇರುವುದು, ಶಕ್ತಿಯ ಕೊರತೆ, ಅಧಿಕಾರದ ಕೊರತೆ, ವರದಕ್ಷಿಣೆ, ಭ್ರೂಣಹತ್ಯೆ, ವಿವಾಹ ವಿಚ್ಛೇದನಾ, ಮಹಿಳಾ ಸವಾಲುಗಳು ಹಾಗೂ ಸ್ಪರ್ಧೆಗಳು ಅವಳನ್ನು ದುರ್ಬಲಗೊಳಿಸಿವೆ.

**ಐತಿಹಾಸಿಕ ಹಿನ್ನೆಲೆ**

ಪ್ರಾಚೀನ ಕಾಲದಿಂದಲೂ ಮಹಿಳೆಗೆ ಉನ್ನತವಾದಂತಹ ಗೌರವ ಆಧರಗಳನ್ನ ಹೊಂದಿದ್ದು, ಅವಳನ್ನು ತಾಯಿಯಾಗಿ, ದೇವತೆಗಾಗಿ, ಮನದನ್ನೆಯಾಗಿ, ಮಗಳಾಗಿ ತನ್ನ ಪಾತ್ರವನ್ನು ನಿರ್ವಹಿಸುತ್ತಾ ಬಂದಿದ್ದಾರೆ. ಪ್ರಕೃತಿಯಲ್ಲಿ ಗುರುತಿಸುವ ಸ್ತ್ರೀಯನ್ನು ವೇದಗಳ ಕಾಲದಲ್ಲಿ ಕೌಟುಂಬಿಕ, ಸಾಮಾಜಿಕ, ಆರ್ಥಿಕ, ಧಾರ್ಮಿಕ ಹೊಣೆಗಾರಿಕೆಯನ್ನು ಹೊಂದಿದ್ದು, ಸ್ತ್ರೀಯನ್ನು (ಅರ್ಧಾಂಗಿ) ಭೂಮಿ, ನದಿ ಮೊದಲಾದ ದೇವತೆಗಳಿಗೆ ಹೋಲಿಸಲಾಗಿದೆ.

ವೇದಗಳ ಕಾಲದಲ್ಲಿ ಸ್ತ್ರೀಯರಿಗೆ ಕಡ್ಡಾಯ ವಿವಾಹ, ಜೀವನ ಸಂಗಾತಿ ಆಯ್ಕೆಯ ಅಧಿಕಾರ, ವಿಧವಾ ಪುನರ್ವಿವಾಹಕ್ಕೆ ಹಾಗೂ ವಿಚ್ಛೇದನಕ್ಕೆ ಅಧಿಕಾರ, ಕುಟುಂಬದ ಆಸ್ತಿಯಲ್ಲಿಯೂ ಸ್ತ್ರೀಯರಿಗೆ ಸಮಾನ ಅಧಿಕಾರ ಮೊದಲಾದವುಗಳನ್ನು ಪಡೆದಿದ್ದು, ಉತ್ತರ ವೇದಗಳ ಕಾಲದಲ್ಲಿ ಅನೇಕ ಮಹಿಳೆಯರು ಹೆಸರು ಕಂಡು ಬಂದರೂ ಕೆಲವೇ ಕೆಲವು ಮಹಿಳೆಯರ ಹೆಸರು ಉನ್ನತವಾದ ಸ್ಥಾನ ಹೊಂದಿದ ಉದಾಹರಣೆ ಕಂಡುಬರುತ್ತದೆ. ಈ ಸಂದರ್ಭದಲ್ಲಿ ಪುರುಷ ಸ್ತ್ರೀಗಿಂತ ಶ್ರೇಷ್ಠ ಎಂಬ ಕಲ್ಪನೆ, ಪತಿಯೇ ಪರದೈವ, ಪಾತಿವ್ರತ್ಯದ ವೈಭವೀಕರಣ, ಪುನರ್ವಿವಾಹ, ವಿವಾಹ ವಿಚ್ಛೇದನಾ, ಸತೀ ಆಚರಣೆ, ಗಂಡು ಮಕ್ಕಳಿಗೆ ಹೆಚ್ಚಿನ ಪ್ರಾಶಸ್ತ್ಯ, ಸ್ತ್ರೀ ಅಶುದ್ದರೆಂಬ ಕಲ್ಪನೆಗಳು, ಆಕೆಗೆ ನೀಡಿದ ದ್ವಿತೀಯ ದರ್ಜೆಯ ಸ್ಥಾನ, ಸ್ತ್ರೀ ಮೇಲೆ ನಿರ್ಬಂಧ ಮತ್ತು ಗೃಹಲಕ್ಷ್ಮೀ ಎಂಬ ಭಾವನೆಗಳು ಬೆಳವಣಿಗೆಯೊಂದಿದವು.

ಮಧ್ಯಯುಗೀನ ಕಾಲದಲ್ಲಂತೂ ಬೆಳವಣಿಗೊಂಡ ಬಾಲ್ಯವಿವಾಹ ಪದ್ದತಿ, ವಿಧವಾ ಪುನರ್ವಿವಾಹ ನಿಷೇಧ, ಸತಿ ಪದ್ದತಿ, ಪರದಾ ಪದ್ದತಿ, ದೇವದಾಸಿ ಪದ್ದತಿ, ಬಹು ಪತ್ನಿತ್ವ, ಶಿಶುಹತ್ಯೆ

ಮೊದಲಾದವುಗಳಿಂದಾಗಿ ಇಂತಹ ಸಂದರ್ಭದಲ್ಲೂ ರಜಿಯಾ, ಅಹಲ್ಯಾಬಾಯಿ, ಅಕ್ಕಮಹಾದೇವಿ, ರಾಣಿ ಶಾಂತಲೆ, ಗಂಗಾಂಬಿಕೆ, ತಿರುಮಲ, ಚೆನ್ನಾಂಬೆ, ದುರ್ಗಾವತಿ, ಕೆಳದಿ ಚೆನ್ನಮ್ಮ, ಸಂಚಿ ಹೊನ್ನಮ್ಮ, ರಾಣಿ ಚನ್ನಮ್ಮ,ಚಾಂದ್ ಬೀಬಿ, ನೂರ್ ಜಹಾನ್, ಮಮ್ತಾಜ್ ಮೊದಲಾದ ರಾಜ ಕುಟುಂಬಕ್ಕೆ ಸೇರಿದವರ ಹೆಸರು ಕಂಡುಬರುತ್ತದೆ. ಬ್ರಿಟೀಷರು ಅಧಿಕಾರ ಚುಕ್ಕಾಣಿ ಹಿಡಿದ ನಂತರವಂತೂ ಇದುವರೆಗಿದ್ದ ಮಹಿಳೆಯರ ಸ್ಥಾನಮಾನದಲ್ಲಿ ಸಾಕಷ್ಟು ಬದಲಾವಣೆಗಳಾದವು. ಅದರಲ್ಲೂ ಭಾರತೀಯ ಮಹಿಳೆಯರ ಬಗ್ಗೆ ಇದ್ದಂತಹ ನಕಾರಾತ್ಮಕ ಧೋರಣೆಗಳು ಬದಲಾವಣೆಗೊಂಡವು. ಮಹಿಳಾ ವಿಮೋಚನಾ ಚಳುವಳಿ, ಸಮಾಜ ಸುಧಾರಕರ ಪರಿಶ್ರಮ, ಸಾಮಾಜಿಕ ಶಾಸನಗಳ ಜಾರಿ, ಮಹಿಳಾ ಸಂಘಟನೆಗಳು, ಉದ್ಯೋಗ ಕ್ಷೇತ್ರದಲ್ಲಿ ಮಹಿಳೆ ತನ್ನನ್ನು ತಾನು ಗುರುತಿಸಿಕೊಳ್ಳುವ ಪ್ರಯತ್ನ ಮಾಡಿದ್ದಲ್ಲದೇ ಸ್ವಾತಂತ್ರ್ಯ ಚಳುವಳಿಯಲ್ಲೂ ಮಹಿಳೆಯರು ಗುರುತಿಸಿಕೊಳ್ಳುವ ಪ್ರಯತ್ನ ಮಾಡಲಾಗುತ್ತದೆ.

ಸ್ವಾತಂತ್ರ್ಯ ಚಳುವಳಿಯ ನಂತರ ಮಹಿಳೆಯರು ಸಂವಿಧಾನಾತ್ಮಕ ರಕ್ಷಣೆ, ಶಾಸನಗಳು, ರಾಜಕೀಯ ಕ್ಷೇತ್ರದಲ್ಲಿ, ಶೈಕ್ಷಣಿಕ ಕ್ಷೇತ್ರದಲ್ಲಿ ಉದ್ಯೋಗ ವಲಯಗಳಲ್ಲಿ ಮಹಿಳೆಯರು ತನ್ನನ್ನ ತಾನು ಗುರುತಿಸಿಕೊಳ್ಳುವ ಪ್ರಯತ್ನ ಮಾಡಿದರು. ಆದರೂ ಸ್ವಾತಂತ್ರ್ಯಾ ನಂತರ ಪಾಶ್ಚಾತ್ಯ ಮಾದರಿಯಲ್ಲಿ ಮಹಿಳಾ ಚಳುವಳಿಗಳು ಭಾರತದಲ್ಲಿ ಜರುಗಲಿಲ್ಲ. ವರದಕ್ಷಿಣೆ, ಭ್ರೂಣಹತ್ಯೆ, ಅತ್ಯಾಚಾರ, ಕೋಮು ಗಲಭೆಗಳು, ಲೈಂಗಿಕ ದೌರ್ಜನ್ಯಗಳು, ಅನಿವಾರ್ಯವಾಗಿ ಕಾನೂನಿನ ರಕ್ಷಣೆ ಕೊಡಲು ಮುಂದಾದರು. ಜೊತೆಗೆ 19ನೆಯ ಶತಮಾನದಲ್ಲಿಯೇ ರಕ್ಷಣಾತ್ಮಕ ಕಾನೂನುಗಳನ್ನು ಜಾರಿಗೆ ತರಲಾಯಿತು. ಭಾರತದ ಅನೇಕ ಸಮಾಜ ಸುಧಾರಕರಾದ ರಾಜರಾಂ ಮೋಹನ್ ರಾಯ್, ದಯನಂದ ಸರಸ್ವತಿ, ಸ್ವಾಮಿವಿವೇಕಾನಂದ, ಗೋಪಾಲ ಕೃಷ್ಣ ಗೋಖಲೆ, ಮಹಾತ್ಮ ಗಾಂಧೀಜಿ ಮೊದಲಾದವರ ಕಾರ್ಯ ನಿರ್ವಹಣೆ ಹಾಗೂ ಒತ್ತಡದ ಪರಿಣಾಮವಾಗಿ ಅನೇಕ ಕಾನೂನುಗಳನ್ನು ಜಾರಿಗೊಳಿಸಲಾಯಿತು.

**ಸ್ವಾತಂತ್ರ್ಯಪೂರ್ವದ ಕಾನೂನುಗಳಲ್ಲಿ ಮಹಿಳಾ ಸಬಲೀಕರಣ:**

**1829ರ ಸತಿ ನಿಷೇಧ ಕಾಯಿದೆ**

ಪತಿಯೊಂದಿಗೆ ಚಿತೆಯೇರಲು ಸಿದ್ಧವಿರಲಿ ಅಥವಾ ಇಲ್ಲದಿರಲಿ ಆತನ ಪತ್ನಿ/ಪತ್ನಿಯರು ತನ್ನ ಬಲಿದಾನ ಮಾಡಿಕೊಳ್ಳಲೇಬೇಕಿದ್ದ; ಸಿದ್ಧವಿಲ್ಲದೆ ಓಡಿ ಹೋಗಲೆತ್ನಿಸಿದರೆ ವಿಧವ ಪತ್ನಿಯನ್ನು ಸಂಬಂಧಿಗಳು ಹಿಡಿದು ತಂದು ಕೈಕಾಲುಗಳನ್ನು ಕಟ್ಟಿ ಬಲವಂತದಿಂದ ಚಿತೆಗೆ ನೂಕಿ ಉರಿಯುವ ಚಿತೆಯಿಂದಲೂ ಎದ್ದು ಬಾರದಂತೆ ಹಸಿಯ ಬಿದುರಿನ ಕೋಲಿನಿಂದ ಆಕೆ ಉರಿದು ಸಾಯುವವರೆಗೂ ಒತ್ತಿ ಹಿಡಿದು ನಿಂತಿರುತ್ತಿದ್ದ ಸಾಯುವ ಭೀತಿಯಿಂದ ಕೂಡಿರುವ ವಿಧವೆಯರಿಗೆ ಹುಚ್ಚು ಧೈರ್ಯ ಬರಿಸಲು ಅಥವಾ ಅವರನ್ನು ಪ್ರಜ್ಞಾಹೀನರನ್ನಾಗಿಸಲು ಮತ್ತು ಬರಿ ಅಮಲು ಪದಾರ್ಥಗಳನ್ನು ಕೂಡ ನೀಡಲಾಗುತ್ತಿದ್ದ ಆ ರುದ್ರ ಭಯಾನಕ ದೃಶ್ಯಕ್ಕೆ ಈ ಕಾಯಿದೆ ತೆರೆ ಎಳೆಯಿತು.

**1872ರ ನಾಗರೀಕ ವಿವಾಹ ಕಾಯ್ದೆ**

ಈ ಕಾಯ್ದೆಯ ಅನ್ವಯ ವಿಧವಾ ವಿವಾಹ, ಅಂತರ್ಜಾತಿಯ ವಿವಾಹಗೆ ಅವಕಾಶ ನೀಡುವ ಜೊತೆಗೆ ವಿವಾಹದ ವಯಸ್ಸನ್ನು 14 ವರ್ಷಗಳಿಗೆ ಎತ್ತರಗೊಳಸಿತು. ಅಲ್ಲದೇ ಬಹುಪತ್ನಿತ್ವವನ್ನು

ನಿಷೇದಿಸಿತು. ಸ್ತ್ರೀಯರ ಸ್ಥಾನಮಾನದ ಸುಧಾರಣೆ ಮೊದಲಾದ ರೀತಿಯಲ್ಲಿ ಸುಧಾರಣೆ ತಂದಿತು. ಈ ಕಾಯ್ದೆಯ ನಂತರ ಆರೇಳು ದಶಕಗಳು ಯಾವುದೇ ಸುಧಾರಣೆಯಾಗಲಿಲ್ಲ.

**1874ರ ವಿವಾಹ ಸ್ತ್ರೀಯರ ಆಸ್ತಿಯ ಕಾಯ್ದೆ**

ವಿವಾಹಿತ ಮಹಿಳೆಯರ ಆಸ್ತಿಯ ಕಾಯ್ದೆ ಸ್ತ್ರೀ ಧನದ ವ್ಯಾಪ್ತಿಯನ್ನು ವಿಸ್ತೃತಗೊಳಿಸಿತು. ಈ ಕಾಯ್ದೆಯಂತೆ ಸ್ತ್ರೀಯೊಬ್ಬಳು ತನ್ನ ಸ್ವಂತ ಪರಿಶ್ರಮ ಹಾಗೂ ಸಾಧನೆಯ ಮೂಲ, ಕಲಾತ್ಮಕವಾದ ಮತ್ತು ಸಾಹಿತ್ಯಿಕ ಕುಶಲತೆಯಿಂದ ಗಳಿಸಿದುದೆಲ್ಲವೂ ಸ್ತ್ರೀಧನವೆನಿಸಿಕೊಳ್ಳುವುದು. ಈ ಕಾಯ್ದೆಯು ಸ್ತ್ರೀಯರಿಗೆ ಲಾಭದಾಯಕವಾದ ಕಾರ್ಯವನ್ನು ಕೈಗೊಂಡು ಹಣ ಸಂಪಾದಿಸಿ ಹಾಗೂ ಆಸ್ತಿಯನ್ನು ಗಳಿಸಿ ಅದರ ಮೇಲೆ ಒಡೆತನವನ್ನು ಹೊಂದಿರುವ ಹಕ್ಕನ್ನು ನೀಡುವುದು. ಸ್ತ್ರೀಯರ ಆರ್ಥಿಕ ಸ್ವಾವಲಂಬನೆ ಹಾಗೂ ಸ್ವಾತಂತ್ರ್ಯದತ್ತ ಇಟ್ಟಂತಹ ಮೊದಲ ಶಾಸನಾತ್ಮಕ ಹೆಜ್ಜೆಯಾಯಿತು.

**ಸಮ್ಮತಿಯ ವಯಸ್ಸಿನ ಕಾಯ್ದೆ 1881**

ಸಾಮಾಜಿಕ ನೇತಾರರ ಪ್ರಯತ್ನದ ಫಲವಾಗಿ ಸಮ್ಮತಿಯ ವಯಸ್ಸಿನ ಕಾಯ್ದೆಯು ಜಾರಿಗೆ ಬಂದಿತು. ಈ ಕಾಯ್ದೆಯಂತೆ 12 ವರ್ಷಕ್ಕೂ ಕಿರಿಯ ಹೆಣ್ಣು ಮಕ್ಕಳಿಗೆ ವಿವಾಹ ಮಾಡುವುದು ಶಿಕ್ಷಾರ್ಹವಾದ ಅಪರಾಧವೆನ್ನಿಸಿಕೊಂಡಿತು. ತಾತ್ವಿಕವಾಗಿ ಈ ಕಾಯ್ದೆಯು ಬಾಲ್ಯವಿವಾಹವನ್ನು ರದ್ದುಗೊಳಿಸಲು ಪ್ರಮುಖ ಹೆಜ್ಜೆಯಾಯಿತು.

**1929ರ ಬಾಲ್ಯವಿವಾಹ ನಿಷೇಧ ಕಾಯ್ದೆ**

ಈ ಕಾಯ್ದೆಯು ಹೆಣ್ಣು ಮಕ್ಕಳ ವಿವಾಹದ ವಯಸ್ಸನ್ನು 14 ವರ್ಷಗಳಿಗೆ ಮತ್ತು ಗಂಡುಮಕ್ಕಳ ವಯಸ್ಸನ್ನು 16 ವರ್ಷಗಳಿಗೆ ಎತ್ತರಿಸಿತು.ಈ ಕಾಯ್ದೆಯ ಉಲ್ಲಂಘನೆಯಾದಲ್ಲಿ ಅಂತಹ ಗಂಡ, ನವ ಬಾಲ ದಂಪತಿಗಳ ಹೆತ್ತವರು ವಿವಾಹವನ್ನು ನಡೆಸಿಕೊಟ್ಟ ಪುರೋಹಿತರೆಲ್ಲರೂ ಜೈಲುವಾಸ ಅನುಭವಿಸಬೇಕಾಗುತ್ತದೆ ಅಥವಾ ದಂಡ ತೆರ ಬೇಕಾಗುತ್ತದೆ ಅಥವಾ ಇವೆರಡನ್ನು ಸ್ವೀಕರಿಸಬೇಕಾದ ಶಿಕ್ಷೆಗೆ ಗುರಿಯಾಗಬೇಕಾತ್ತದೆ. ಈ ಕಾಯ್ದೆಯು ಜಾರಿಗೆ ಬಂದಿದ್ದರಿಂದ ತಕ್ಷಣವೇ ಮಹಿಳೆಯರ ಹಕ್ಕುಗಳಲ್ಲೇನು ತೀವ್ರತರ ಬದಲಾವಣೆಯನ್ನೇನು ತರಲಿಲ್ಲ ಅಥವಾ ಪವಾಡವೇನು ಮಾಡಲಿಲ್ಲ. ಶಿಕ್ಷೆಯ ಪ್ರಮಾಣವನ್ನು ಸಹಾ ಉಗ್ರವಾಗಿಯೂ ಇರಲಿಲ್ಲ. ಅಪರಾಧಿಗಳಿಗೆ ಶಿಕ್ಷೆಯಾದರೂ ಸಿಂಧುತ್ವ ಸಾಬೀತಾಗುತ್ತಿರಲಿಲ್ಲ. ನೇರವಾಗಿ ಬ್ರಿಟೀಷರ ಕೈಯಲ್ಲಿ ಇಲ್ಲದ ಕೆಲವು ಸಂಸ್ಥಾನಗಳಲ್ಲಿ ಈ ಕಾಯ್ದೆಯು ಜಾರಿಗೂ ಬರಲಿಲ್ಲ.

ಈ ನ್ಯೂನತೆಗಳ ಹೊರತಾಗಿಯೂ ತಕ್ಷಣ ಮಾರ್ಪಾಡು ಮಾಡದೇ ಹೋದರೂ ಈ ಕಾಯ್ದೆಯು ಆ ಕೂಡಲೇ ಅಲ್ಲವಾದರೂ ಈ ಕಾಯ್ದೆಯು ವ್ಯಾಪಕವಾದ ಜನಬೆಂಬಲವನ್ನು ಗಳಿಸಿತು. ಬ್ರಿಟೀಷ್‌ರು ಭಾರತವನ್ನು ಬಿಟ್ಟು ಹೊರಡುವ ಸಮಯಕ್ಕೆ ಬಾಲ್ಯ ವಿವಾಹದ ಪ್ರಕರಣಗಳು ಅತ್ಯಂತ ಕಡಿಮೆಯಾಗಿದ್ದವು. ಸ್ವಾತಂತ್ರ್ಯ ಭಾರತದ ಕಾಲಾವಧಿಯಲ್ಲಿ ಅನೇಕ ಕಾಯ್ದೆಗಳನ್ನು ಜಾರಿಗೆ ತರುವ ಮೂಲಕ ಮಹಿಳಾ ಸಬಲೀಕರಣದತ್ತ ಮುನ್ನಡೆಯಲು ಕಾರಣವಾಯಿತು. 2006ರ ಕಾಯ್ದೆಯು ಮತ್ತೊಮ್ಮೆ ಪುನರ್ ವಿಮರ್ಶೆಗೆ ಒಳಪಟ್ಟಿತು.

**ಸ್ವಾತಂತ್ರೋತ್ತರ ಕಾಲದಲ್ಲಿ ಕಾನೂನುಗಳಲ್ಲಿ ಮಹಿಳಾ ಸಬಲೀಕರಣದ ಹೆಜ್ಜೆಗಳು**

ಹಲವಾರು ಶತಮಾನಗಳ ಅವಧಿಯುದ್ದಕ್ಕೂ ಸ್ತ್ರೀಯರನ್ನು ಶಾಸ್ತ್ರಗಳ ದೃಷ್ಟಿಯಿಂದ ಎರಡನೆಯ ದರ್ಜೆಯ ಪ್ರಜೆಗಳನ್ನಾಗಿ ನೋಡುತ್ತಿದ್ದ ಆಚರಣೆಗೆ ಈಗ ಶಾಶ್ವತವಾದ ತೆರೆಯೊಂದನ್ನು ಎಳೆದಂತಾಯಿತು. ಭಾರತೀಯ ಸಂವಿಧಾನವು ಸ್ತ್ರೀಯರಿಗೂ ಪುರುಷರಿಗೆ ಸಮಾನವಾದ ವೈಯಕ್ತಿಕ ಸ್ವಾತಂತ್ರ್ಯ, ಮೂಲಭೂತ ಹಕ್ಕುಗಳು, ವಿಚಾರ ಸ್ವಾತಂತ್ರ್ಯ, ಅಭಿವ್ಯಕ್ತಿ ಸ್ವಾತಂತ್ರ್ಯ, ಧಾರ್ಮಿಕ, ವೈವಾಹಿಕ, ರಾಜಕೀಯ, ಶೈಕ್ಷಣಿಕ ಮತ್ತಿತರ ಎಲ್ಲಾ ಬಗೆಯ ಸ್ವಾತಂತ್ರ್ಯವನ್ನು ನೀಡಿರುವ ಭದ್ರತೆ ನೀಡಿದೆ. ಸಂವಿಧಾನವು ಅನುಷ್ಠಾನಕ್ಕೆ ಬಂದ ಆರಂಭದಲ್ಲಿಯೇ 1952ರಲ್ಲಿ ನಡೆದ ಸಾರ್ವತ್ರಿಕ ಚುನಾವಣೆಯಲ್ಲಿ ಸಮಾನ ಹಕ್ಕುಗಳೊಂದಿಗೆ ಚುನಾವಣಾ ಕಣದಲ್ಲಿ ಹಾಗೂ ಮತನೀಡುವ ಪ್ರಕ್ರಿಯೆಯಲ್ಲಿ ಭಾಗಿಗಳಾದ ಭಾರತೀಯ ಸ್ತ್ರೀಯರು ತಮಗೆ ಆಗ ನೀಡಲಾಗಿದ್ದ ಸ್ವಾತಂತ್ರ್ಯ ಹಾಗೂ ಹಕ್ಕುಗಳ ಚಲಾವಣೆಯ ಮೊಟ್ಟ ಮೊದಲನೆಯ ಹಾಗೂ ವಚನಕಾರಕವಾದ ಅನುಭವವನ್ನು ಪಡೆದರು.

ಬ್ರಿಟೀಷ್ ಕಾಲದಲ್ಲಿ ಸೀಮಿತವಾಗಿದ್ದ ಮತದಾನದ ಹಕ್ಕು ಈಗಿನ ಮತದಾನದ ತತ್ವದಿಂದ ಸಾರ್ವತ್ರಿಕವಾಗಿ ಎಲ್ಲರಿಗೂ ನೀಡಲ್ಪಟ್ಟಿತ್ತು. ಸಂವಿಧಾನಾತ್ಮಕವಾಗಿ ಸಮಾನತೆಯನ್ನು ನೀಡಿದಾಗ್ಯೂ ಸಮಾಜದ ಪರಂಪರಾನುಗತವಾದ ಕೆಲವು ದುಷ್ಟ ಆಚರಣೆಗಳನ್ನು ನಿವಾರಣೆ ಮಾಡದೆ ಮಹಿಳೆಯರು ಆಧುನಿಕ ಯುಗದ "ಮುಕ್ತ ಜೀವನ ನಡೆಸುವುದು ಕಷ್ಟವೆಂಬುದನ್ನು ಮನಗಂಡ ನಮ್ಮ ತಜ್ಞರು ಹಿಂದೂ ಕೋಡ್‌ನ್ನು ಸಿದ್ದಪಡಿಸತೊಡಗಿದರು. 1952ರ ಚುನಾವಣೆಯ ನಂತರ ಹಿಂದೂಕೋಡ್‌ಗೆ ಸಂಬಂಧಿಸಿದಂತೆ ಹಲವಾರು ಮಸೂದೆಗಳು ಕಾಯ್ದೆಯಾಗಿ ಪರಿವರ್ತನೆಗೊಂಡವು. ಸ್ತ್ರೀಯರ ಕಲ್ಯಾಣಕ್ಕೆ ಸಂಬಂಧಿಸಿದಂತೆ ತಂದಂತಹ ಹಲವಾರು ಕಾಯ್ದೆಗಳು ಮಹಿಳೆಯರ ಸ್ಥಾನಮಾನಗಳನ್ನು ಬದಲಾವಣೆ ಮಾಡಿದವು. ಭಾರತವು ಸ್ವತಂತ್ರ್ಯವನ್ನು ಪಡೆದ ಮೇಲೆ ಸ್ತ್ರೀಯರ ಸ್ಥಾನಮಾನವನ್ನು ಹೆಚ್ಚಿಸುವ ಹಾಗೂ ಕಲ್ಯಾಣವನ್ನು ಸೃಷ್ಟಿಸುವ ದೃಷ್ಟಿಯಿಂದ ಹಲವಾರು ಶಾಸನಾತ್ಮಕ ಶೈಕ್ಷಣಿಕ, ಆರ್ಥಿಕ, ಸಾಮಾಜಿಕ ಸುಧಾರಣಾತ್ಮಕ ಕಾರ್ಯಕ್ರಮಗಳನ್ನು ಕೈಗೊಳ್ಳಲಾಯಿತು.

ಸ್ವತಂತ್ರ್ಯ ಭಾರತದ ಸಂವಿಧಾನವು 1950ರ ಜನವರಿ 26ರಂದಿನಿಂದ ಜಾರಿಗೊಂಡ ಮೇಲೆ ಪುರುಷರಿಗೆ ಸಮಾನರೇ ಆಗಿದ್ದಾರೆ. ಸಂವಿಧಾನದ 14 ಹಾಗೂ 15ನೇ ವಿಧಿಗಳು ಸಮಾನತೆಯ ಹಕ್ಕನ್ನು ದೇಶದ ಎಲ್ಲಾ ಪೌರರಿಗೆ ಯಾವುದೇ ಬಗೆಯ ವರ್ಗಭೇದ, ಮತಭೇದ, ಪಕ್ಷಭೇದ, ಲಿಂಗಭೇದವಿಲ್ಲದೇ ಸಮಾನವಾಗಿಯೇ ನೀಡುತ್ತಿದೆ, 15(ಎ) ಲಿಂಗಬೇಧ ಸಮಸ್ಯೆ, 15(3) ಮಹಿಳೆಯರ ರಕ್ಷಣೆ 16ನೇ ವಿಧಿಯು ಸಮಾನತೆಯನ್ನು 39(ಎ) ಪುರುಷ ಮತ್ತು ಸ್ತ್ರೀಯರ ಜೀವನಕ್ಕೆ ಅಗತ್ಯವಾದ ಹಕ್ಕುಗಳನ್ನು 42ನೇ ವಿಧಿಯು ಮಾತೃತ್ವ ಪರಿಹಾರಕ್ಕೆ ಅವಕಾಶವನ್ನು 4(ಎ) ಮಹಿಳಾ ಹಕ್ಕುಗಳನ್ನು ಪ್ರತಿಪಾದಿಸಿತು. 51(ಎ) ಸ್ತ್ರೀ–ಪುರುಷರ ಮಧ್ಯೆ ಸೌಹಾರ್ದತೆಯನ್ನು ಪ್ರತಿಪಾದಿಸಿತು. ಸಂವಿಧಾನದ ಪ್ರಸ್ತಾವನೆಯಲ್ಲಿಯೂ ಸಮಾನತೆಯ ತತ್ವವನ್ನು ಸ್ವೀಕರಿಸಿದೆ ಎಂದು ಹೇಳಲಾಗಿದೆ. 1993ರಲ್ಲಿ 73 ಮತ್ತು74ನೇ ತಿದ್ದುಪಡಿ ಕಾಯ್ದೆಗಳು ಸಂವಿಧಾನಾತ್ಮಕವಾಗಿ ಶೇ.33ರಷ್ಟು ಮೀಸಲಾತಿಯನ್ನು ಕಲ್ಪಿಸಿತು. ಪಂಚಾಯಿತಿ, ಮುನ್ಸಿಪಾಲಿಟಿ ಮತ್ತು ಬ್ಲಾಕ್‌ಗಳಲ್ಲಿ ಚುನಾವಣಾ ಪ್ರಾತಿನಿಧಿತ್ವ ದೊರಕಿಸಿತು.

ಆಧುನಿಕ ಮನು ಎಂದೇ ಕಾನೂನು ಮಂತ್ರಿಯಾಗಿದ್ದು, ಮಹಿಳೆಯರ ಪುರೋಗಾಮಿಗಾಗಿ ಸಂಸತ್‌ನಲ್ಲಿ ಹಿಂದೂ ಕೋಡ್‌ಬಿಲ್‌ನ್ನು ಮಂಡಿಸಿದ ಅಂಬೇಡ್ಕರ್‌ಅವರಿಗೆ ಸವರ್ಣೀಯ ಹಿಂದೂಗಳ ವಿರೋಧದಿಂದಾಗಿ ತಮ್ಮ ಮಂತ್ರಿ ಪದವಿಗೆ ರಾಜೀನಾಮೆ ನೀಡಬೇಕಾಯಿತು. ಆದರೂ ಮಹಿಳಾ ಸಬಲೀಕರಣದಲ್ಲಿ ಈ ಸಂವಿಧಾತ್ಮಕ ಕಾಯ್ದೆಗಳು ಪ್ರಮುಖ ಪಾತ್ರವಹಿಸುತ್ತಿವೆ.

**ಹಿಂದೂ ವಿವಾಹ ಕಾಯ್ದೆ 1955**

ಈ ಕಾಯ್ದೆಯು ಬಹುಪತ್ನಿತ್ವ, ಬಾಲ್ಯ ವಿವಾಹ ನಿಷೇಧ, ಹೆಣ್ಣು ಮತ್ತು ಗಂಡಿನ ವಿವಾಹ ಮಿತಿಯನ್ನು ಕ್ರಮವಾಗಿ 18 ಮತ್ತು 21 ವರ್ಷವರ್ಷಕ್ಕೆ ನಿಗಧಿಗೊಳಿಸಿತು. 1955ರ ಹಿಂದೂ ಉತ್ತರಾಧಿಕಾರತ್ವ ಕಾಯಿದೆ ಪಿತ್ರಾರ್ಜಿತ ಆಸ್ತಿಯಲ್ಲಿ ಸಮಪಾಲು ಪಡೆಯುವ ಹಕ್ಕು ದೊರಕಿಸಿಕೊಟ್ಟಿತು. ಇವುಗಳಲ್ಲದೆ ಹಿಂದೂ ದತ್ತು ಮತ್ತು ಜೀವನಾಂಶ ಕಾಯ್ದೆ 1956, ವಿಶೇಷ ವಿವಾಹ ಕಾಯ್ದೆ–1956, ಕನ್ಯೆಯರ ಮತ್ತು ಮಹಿಳೆಯರ ಅನೈತಿಕ ವ್ಯಾಪಾರ ಪ್ರತಿಬಂಧಕ ಕಾಯ್ದೆ–1956, ವರದಕ್ಷಿಣೆ ನಿಷೇಧ ಕಾಯ್ದೆ– 1961, ಪ್ರಸೂತಿಕಾ ಸೌಲಭ್ಯ ಕಾಯ್ದೆ–1961, ವೈದ್ಯಕೀಯ ಗರ್ಭ ನಿವಾರಣಾ ಕಾಯ್ದೆ–1971, ಸಮಾನ ವೇತನ ಕಾಯ್ದೆ–1976, ಕಾರ್ಖಾನೆಗಳ (ತಿದ್ದುಪಡಿ) ಕಾಯ್ದೆ 1976, ವಿವಾಹ ಕಾನೂನುಗಳ (ತಿದ್ದುಪಡಿ) ಕಾಯ್ದೆ–1976, ಬಾಲ್ಯವಿವಾಹ ಪ್ರತಿಬಂಧ ಕಾಯ್ದೆ–1978, ಭಾರತೀಯ ಪುರಾವೆಗಳ ಕಾಯಿದೆ–1983, ನಕ್ರಿಮಿನಲ್ ಕಾನೂನು ತಿದ್ದುಪಡಿ ಕಾಯ್ದೆ–1983, ಕುಟುಂಬ ನ್ಯಾಯಾಲಯ ಕಾಯ್ದೆ–1984, ಸ್ತ್ರೀಯರ ಅಸಭ್ಯ ಪ್ರತಿನಿಧಿಸುವಿಕೆಯ ನಿಷೇಧ ಕಾಯ್ದೆ–1986, ಮುಸ್ಲಿಂ ಸ್ತ್ರೀಯರ (ವಿಚ್ಛೇದನಾ ಹಕ್ಕುಗಳ ರಕ್ಷಣಾ) ಕಾಯ್ದೆ–1986, 2006ರ ಕಾಯ್ದೆಯು ವಿವಾಹದ ವಯೋಮಿತಿಯನ್ನು ಸ್ತ್ರೀ ಪುರುಷರಿಗೆ ಕ್ರಮವಾಗಿ 18 ಮತ್ತು 21ಕ್ಕೇರಿಸಿತು.

73ನೇ ತಿದ್ದುಪಡಿ ಕಾಯ್ದೆಯು ಮಹಿಳಾ ರಾಜಕೀಯ ಸ್ವಾತಂತ್ರ್ಯವನ್ನು ಪ್ರತಿಪಾದಿಸಿದೆ. ಅಲ್ಲದೇ ರಾಷ್ಟ್ರ ಕಟ್ಟುವ ಕಾರ್ಯದಲ್ಲಿ ಮಹಿಳೆಯರ ಪಾತ್ರ ಹಿರಿದಾದು. ಮಹಿಳೆಯರು ಕ್ಲಿಷ್ಟ ಪರಿಸ್ಥಿಯನ್ನು ಎದುರಿಸುತ್ತಿದ್ದು, ಸಮಾಜ ಹಾಗೂ ಕುಟುಂಬ ಎರಡರಿಂದಲೂ ಸಾಕಷ್ಟು ತೊಂದರೆಯನ್ನು ಎದುರಿಸಿತ್ತಿದ್ದಾಳೆ. ಕುಟುಂಬದಲ್ಲಿನ ಬೆಂಬಲದ ಕೊರತೆ, ಪುರುಷ ವರ್ಗದಿಂದ ಲಿಂಗ ಭೇದ, ಅಸಮಾನತೆ ಹಾಗೂ ರಕ್ಷಣೆಯ ಸಮಸ್ಯೆಯನ್ನು ಎದುರಿಸುತ್ತಿರುವ ಮಹಿಳೆಯರಿಗೆ ಅಗತ್ಯವಾಗಿ ಕಾನೂನುಗಳು ಅವಳ ಹಕ್ಕುಗಳು, ಶಕ್ತಿ ಸಾಮರ್ಥ್ಯ, ಹೊಣೆಗಾರಿಕೆಯನ್ನು ಮನ್ನಿಸಬೇಕಾಗುತ್ತದೆ. ಕೌಟುಂಬಿಕ ಉಳಿವಿಗೆ ಸಮಾಜದ ಬೆಳವಣಿಗೆಗೆ ಮಹಿಳೆಯರ ಪಾತ್ರವು ಅಗತ್ಯ ಹಾಗೂ ಅನಿವಾರ್ಯವೂ ಹೌದು. ಆದ್ದರಿಂದ ಮಹಿಳಾ ಸಬಲೀಕರಣಕ್ಕೆ ಕಾನೂನುಗಳು ಅತಿ ಅವಶ್ಯಕವಾಗಿವೆ.

ಕುಟುಂಬಕ್ಕೆ ಪಿತೃತ್ವ ಹಾಗೂ ಮಾತೃತ್ವ ಎರಡು ಕೂಡ ಅವಶ್ಯ ಕೌಟುಂಬಿಕ ಜವಾಬ್ದಾರಿಯೊಂದಿಗೆ ಅನೇಕ ರೀತಿಯಲ್ಲಿ ಪಾತ್ರವನ್ನು ನಿರ್ವಹಿಸುತ್ತಿದ್ದರೂ ಕಾನೂನಿನ ಮೂಲಕ ಮಹಿಳೆಯರ ಆರ್ಥಿಕ, ಸಾಮಾಜಿಕ, ರಾಜಕೀಯ, ಧಾರ್ಮಿಕ ಸ್ವಾತಂತ್ರ್ಯ ಕಾಪಾಡಿಕೊಳ್ಳಬೇಕಾದರೆ ಅವಶ್ಯಕವಾಗಿ ಕಾನೂನಿನ ಮೂಲಕ ಬೆಂಬಲ ಅವಶ್ಯಕವಾಗಿರುತ್ತದೆ. ಸಾಮಾನ್ಯವಾಗಿ ಮಹಿಳೆಯರು ಗೃಹಕೃತ್ಯ, ಮಕ್ಕಳ ಪಾಲನೆ, ಸರ್ಕಾರಿ ಮತ್ತು ಖಾಸಗಿಯಾಗಿ ತೊಡಗಿಸಿಕೊಳ್ಳುವಿಕೆ, ವಯಸ್ಸಾದ ಮತ್ತು ರೋಗಪೀಡಿತ ಹಿರಿಯರ ಮತ್ತು ಕುಟುಂಬ ರಕ್ಷಣೆ ಸರ್ವೆ ಸಾಮಾನ್ಯವಾಗಿರುತ್ತದೆ. ಮಹಿಳೆಯರು ನಿರ್ಧಿಷ್ಟ ಗುರಿ ತಲುಪುವ ಸಲುವಾಗಿ

ಅನೇಕ ಪ್ರಯತ್ನಗಳು ಅವಶ್ಯವಾಗಿವೆ. ಲೈಂಗಿಕ ಸಮಾನತೆಗಾಗಿ ಮಾನವ ಹಾಗೂ ಹಣಕಾಸಿನ ಸಂಪನ್ಮೂಲಗಳನ್ನು ವ್ಯವಸ್ಥಿತವಾಗಿ ಬಳಸಿಕೊಳ್ಳಬೇಕಾಗಿದೆ.

ಮಹಿಳೆಯರ ಅಭಿವೃದ್ದಿಗಾಗಿ ಕಾರ್ಯಕ್ರಮಗಳು, ಯೋಜನೆಗಳನ್ನು, ನೀತಿಗಳನ್ನು ವಿಶೇಷವಾದ ಮಾನದಂಡಗಳನ್ನು ಅನುಸರಿಸುವುದು ಅತಿ ಅವಶ್ಯಕವಾಗಿದೆ. ಸ್ಥಳೀಯ, ಪ್ರಾದೇಶಿಕ, ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ಮಟ್ಟದಲ್ಲಿನ ನೆರವು ಅಗತ್ಯವಾಗಿದೆ. ಲಿಂಗಾಧಾರಿತ ಜಗತ್ತಿನ ಯಾವುದೇ ಕಾರ್ಯಕ್ರಮಗಳ ಸಹಕಾರಗಳನ್ನು ಪಡೆದು ಅವರ ಅಭಿವೃದ್ದಿಗೆ ಶ್ರಮಿಸಬಹುದಾಗಿದೆ. ಅದರಲ್ಲೂ ಆಧುನಿಕ ಕಾಲದಲ್ಲಿ ಯಂತೂ ಸ್ವಾತಂತ್ರ್ಯ ಪೂರ್ವ ಹಾಗು ಸ್ವಾತಂತ್ರ್ಯಾ ನಂತರ ಎಂಬ ಎರಡು ಭಾಗಗಳಾಗಿ ಮಾಡಲಾಗಿದ್ದು ಅನಿಬೆಸೆಂಟ್, ಸರೋಜಿನಿ ನಾಯ್ಡು, ಕಮಲಾದೇವಿ ಚಟ್ಟೋಪಾಧ್ಯಾಯ ಮೊದಲಾದವರು ಸಾಮಾಜಿಕ ಸುಧಾರಣೆಗಾಗಿ ಶ್ರಮಿಸಿದರೆ, ಸ್ವಾತಂತ್ರ್ಯಪೂರ್ವ ಹಾಗು ಸ್ವಾತಂತ್ರ್ಯಾ ನಂತರ ನಂತರದಲ್ಲಿ ಕಸ್ತೂರಿ ಬಾ, ಮೇಡಂ ಕಾಮ, ಸರಳಾದೇವಿ, ಮುತ್ತುಲಕ್ಷ್ಮಿ ರೆಡ್ಡಿ, ಅರುಣಾ ಆಸಫ್, ಸುಚೇತ ಕೃಪಲಾನಿ, ದುರ್ಗಬಾಯಿ ದೇಶಮುಖ್, ಲತಾರೆಡ್ಡಿ, ಪ್ರೀತಿಲತಾ, ಕ್ಯಾಪ್ಟನ್ ಲಕ್ಷ್ಮಿಮತ್ತು ಜಾನಕಿ ದೇವಾರ್ ಮತ್ತು ರಾಧಬಾಯಿ ಮೊದಲಾದವರು ಮಹಿಳಾ ಸಬಲೀಕರಣಕ್ಕಾಗಿ ಸಾಕಷ್ಟು ಪ್ರಯತ್ನ ಮಾಡಿದ್ದಾರೆ. ಇನ್ನೂ ಸಾಕಷ್ಟುಗಳು ಪ್ರಯತ್ನಗಳು ನಡೆಯಬೇಕಾಗಿದೆ.

ನವೆಂಬರ್ 26, 1949 ಸಂವಿಧಾವನ್ನು ಒಪ್ಪಿಕೊಂಡರೂ ಅಧಿಕೃತವಾಗಿ ಜಾರಿಗೆ ಬಂದುದು 26–01–1950ರಂದು ಕೇಂದ್ರ ಹಾಗೂ ರಾಜ್ಯಗಳೆರಡೂ ಕಾರ್ಯ ಪ್ರವೃತ್ತವಾಗಲು ಕಾರಣವಾಯಿತು. ಸಂವಿಧಾನದ 14ನೇ ವಿಧಿಯು ಸಮಾನತೆಯನ್ನು ಪ್ರತಿಪಾದಿಸಿದರೆ 15ನೇ ವಿಧಿಯು ಲಿಂಗ ತಾರತಮ್ಯವನ್ನು ನಿಷೇಧಿಸುತ್ತದೆ. 16(1) ಮತ್ತು(2) ವಿಧಿಗಳು ಉದ್ಯೋಗ ತಾರತಮ್ಯತೆಯ ವಿರುದ್ಧ ನಿರ್ಬಂಧ ಹೇರಿದೆ. 15(3) ವಿಧಿಯು ಮಹಿಳೆಯರು ಮತ್ತು ಮಕ್ಕಳಿಗಾಗಿ ಸಂವಿಧಾನಾತ್ಮಕ ಸಬಲೀಕರಣಕ್ಕೆ ಅವಕಾಶ ನೀಡಿದೆ. 39 ಮತ್ತು 42ನೇ ವಿಧಿಗಳು ಮಹಿಳೆಯರ ಹಾಗೂ ಮಕ್ಕಳ ಆರೋಗ್ಯ ಮತ್ತು ಆರ್ಥಿಕ ಲಾಭದ ಹಿನ್ನೆಲೆಯಲ್ಲಿ ಬೈಯ್ಯುವುದರ ವಿರುದ್ಧ ಮಹಿಳೆಯರು ಮಾತೃತ್ವ ರಜೆ (42) ಪಡೆಯುವ ಅವಕಾಶ ಕಲ್ಪಿಸಿದೆ. ಅಂತರಾಷ್ಟ್ರೀಯ ಕಾರ್ಮಿಕ ಸಂಸ್ಥೆಯು ಸಹಾ ಶೋಷಣೆಯ ವಿರುದ್ಧ ರಕ್ಷಣೆ ನೀಡುವ ಉದ್ದೇಶ ಹೊಂದಿದೆ. 2013ರ ಕಾಯ್ದೆಯು ಲೈಂಗಿಕ ದೌರ್ಜನ್ಯದ ವಿರುದ್ಧ ತೀವ್ರ ರಕ್ಷಣೆಯನ್ನು ಒದಗಿಸಿದೆ.

ಆದ್ದರಿಂದ ಮಹಿಳಾ ಜಾಗೃತಿ ಅತೀ ಅವಶವಾಗಿದ್ದು, ಅಧಿಕ ಅವಧಿಗೆ ದುಡಿಸಿಕೊಳ್ಳುತ್ತಿರುವುದು, ನಿತ್ಯ ಬಲವಂತದ ದುಡಿಮೆ 12 ಗಂಟೆ ಮೇಲ್ಪಟ್ಟ ದುಡಿಮೆ, ಸರಾಸರಿ 10 ಗಂಟೆಗಿಂತಲೂ ಹೆಚ್ಚಿಗೆ ದುಡಿಮೆ, ದುರ್ಬಲ ಕಾರ್ಯನಿರತ ವಾತಾವರಣ, ಕುಡಿಯುವ ನೀರು, ಶೌಚಾಲಯ ಸೌಕರ್ಯ, ಆರೋಗ್ಯ ಹಾಗೂ ವಿಶ್ರಾಂತಿ ಗೃಹಗಳಿಲ್ಲದೆ ಯಿರುವುದು. ಹೊಟ್ಟೆನೋವು ಹೃದಯಕ್ಕೆ ಸಂಬಂಧಿಸಿದ, ರಕ್ತಹೀನತೆಯಂತಹ ಹಾಗೂ ಅಸ್ತಮದಂತಹ ರೋಗಗಳಿಗೆ ತುತ್ತಾಗುವುದು ಅಥವಾ ಬೇರೆ ಯಾವುದಾದರೂ ಮಾರಾಣಂತಿಕ ರೋಗಕ್ಕೆ ತುತ್ತಾಗಿರುವುದು. ಮಹಿಳೆಯರಿಗೆ ಶೌಚಾಲಯ ಬಳಕೆ ನಿಷೇಧ ಆರೋಗ್ಯ, ಕ್ಷೇಮ ಸೌಲಭ್ಯಗಳ ದುರ್ಬಳಕೆ. ಪರಿಹಾರ ಪಡೆದುಕೊಳ್ಳಲು ಸಾಧ್ಯವಾಗದೇ ಇರುವುದು. ಕಾನೂನು ನೆರವು ಇಲ್ಲದಿರುವುದು. (ಇ.ಎಸ್.ಐ., ಪಿ.ಎಫ್. ಮಾತೃತ್ವ ರಜೆ ಸೌಕರ್ಯಗಳು, ಕೇಂದ್ರ ಮತ್ತು ರಾಜ್ಯ ಕಾನೂನುಗಳು ಅನ್ವಯವಾಗದೆ ಇರುವುದು. ಅತ್ಯಂತ ಕಡಿಮೆ ಕೂಲಿ ನಿಗದಿ 2ನೇ ವೇತನ ಹೆಚ್ಚಳವನ್ನು ಅನೇಕ

ವರ್ಷಗಳವರೆಗೆ ಸರಿಯಾದ ಅವಧಿಗೆ ಸಂದಾಯ ಮಾಡದಿರುವುದು, ಲಿಂಗ ತಾರತಮ್ಯತೆ, ಅಸಮಾನ ವೇತನ, ಸಂಘಟನೆನಾ ಅವಕಾಶ ನೀಡದೆ ಇರುವುದು. ಸಂಘಟನಾ ಸೌಲಭ್ಯಗಳ ಕೊರತೆ ಮೊದಲಾದವು. ಈ ಎಲ್ಲಾ ಸಮಸ್ಯೆಗಳಿಗೆ ಕಾನೂನಿನಲ್ಲಿ ಪರಿಹಾರವಿದ್ದರೂ ಕೂಡ ಸಮರ್ಪಕವಾಗಿ ಜಾರಿಯಾಗದ ಕಾರಣ ಸಮಸ್ಯೆಗಳು ಸಮಸ್ಯೆಗಳಾಗಿಯೇ ಮುಂದುವರೆಯುತ್ತಿವೆ. ಆದ್ದರಿಂದ ಮಹಿಳಾ ಸಬಲೀಕರಣಕ್ಕಿರುವ ಕಾನೂನುಗಳು ಪರಿಣಾಮಕಾರಿಯಾಗಿ ಜಾರಿಯಾಗಬೇಕಿದೆ.

**ಪರಾಮರ್ಶನ ಗ್ರಂಥಗಳು**


- ಪ್ರಜ್ಞಾ, (2017). ನೇಕಾರ ಸಮುದಾಯದ ಸಾಮಾಜಿಕ–ಆರ್ಥಿಕ ಬದುಕು. ಬರಹ ಪಬ್ಲಿಷಿಂಗ್ ಹೌಸ್, ಬೆಂಗಳೂರು.
- KarthicDas and Gopal Sharma. (2016). Empowerment and Socio economic Development. New Century Publications,NewDelhi.
- Prema pande. (2015). Economic Empowerment of Women. Aadi Publication, New Delhi.
- Rajive Kumar Narendra Kumar. (2015). Knowledge Society and Women Empowerment, Sarup Book publishing private ltd, New Delhi.
- Sujnana raju. (2017). Women Empowerment in contemporary perspective, Swastik publications, New Delhi.